## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

**ಸತ್ರ ಮೊಕದ್ದಮೆ ನಂಃ 75/2023**

| | | |
|---|---|---|
| ಸಾಕ್ಷಿದಾರರ ಹೆಸರು | - ಗುರುದತ್ ಅನಂತ ಕಾಮತ್ | ಪಿಡಬ್ಲೂ - 12 |
| ತಂದೆಯ ಹೆಸರು | - ಅನಂತ | ಸಿಡಬ್ಲೂ - 25 |
| ವಯಸ್ಸು | - 45 ವರ್ಷ | |
| ಉದ್ಯೋಗ | - ಸಿ ಪಿ ಐ, ಎನ್.ಆರ್. ಪುರ ವೃತ್ತ | |
| ವಾಸ ಸ್ಥಳ | - ಎನ್.ಆರ್. ಪುರ | |

(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)

ದಿನಾಂಕಃ 10-02-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ನಾನು ಚುನಾವಣೆ ನಿಮಿತ್ತ ವರ್ಗಾವಣೆಗೊಂಡು ದಿಃ 03-02-2023 ರಿಂದ ದಿಃ 20-06-2023 ರವರೆಗೆ

ಎನ್.ಆರ್.ಪುರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 11-03-2023 ರಂದು ಈ ಪ್ರಕರಣದ ಕಡತವನ್ನು ಫ್ರಾಸಾ.8 ರವರಿಂದ ಪಡೆದು ಪರಿಶೀಲಿಸಿ ತನಿಖೆ ಮುಂದುವರೆಸಿದೆನು. ಅದೇ ದಿನ ಸಾಕ್ಷಿದಾರರಾದ ಚಾಸಾ.8 ರವರ ಹೇಳಿಕೆಯನ್ನು ಪಡೆದುಕೊಂಡೆನು.

3. ನಂತರ ನಾನು ಮದುಗುಣಿ ಸೀಕೆ ಗ್ರಾಮದಲ್ಲಿ ಫ್ರಾಸಾ.1 ರವರ ಮನೆಯ ಮುಂಭಾಗದಲ್ಲಿರುವ ಎನ್.ಆರ್.ಪುರ-ಬಾಳೆಹೊನ್ನೂರು ರಸ್ತೆಯಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದೆನು. ಫ್ರಾಸಾ.4 ಮತ್ತು ಚಾಸಾ.8 ರವರಿಗೆ ಸ್ಥಳಕ್ಕೆ ಬಂದು ಪಂಚರಾಗಿ ಸಹಕರಿಸುವಂತೆ ನೋಟೀಸನ್ನು ಜಾರಿ ಮಾಡಿದೆನು. ಸದರಿ ನೋಟೀಸನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.29 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.29(ಬಿ) ಎಂದು ಗುರುತಿಸಲಾಯಿತು.

4. ಸ್ಥಳದಲ್ಲಿ ಹಾಜರಿದ್ದ ಫ್ರಾಸಾ.1 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಮೇಲೆ ಹೇಳಿದ ಪಂಚರ ಸಮಕ್ಷಮ ಬೆಳಿಗ್ಗೆ 8 ಗಂಟೆಯಿಂದ 9.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಕಚ್ಚಾ ನಕ್ಷೆಯನ್ನು ತಯಾರಿಸಿದೆನು. ಸದರಿ ಪಂಚನಾಮೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು,

ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು.

5. ಸದರಿ ಪಂಚನಾಮೆಯ ಕಾಲಕ್ಕೆ ಫ್ರಾಸಾ.9 ರವರು ನನ್ನ ಸೂಚನೆಯ ಮೇರೆಗೆ ಫೋಟೋಗಳನ್ನು ತೆಗೆದಿರುತ್ತಾರೆ. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.3 ರಿಂದ ಪಿ.8 ಮತ್ತು ಪಿ.30 ಎಂದು ಗುರುತಿಸಲಾಗಿರುತ್ತದೆ. ಸದರಿ ಪಂಚನಾಮೆಯ ಕಾಲಕ್ಕೆ ಕೃತ್ಯ ನಡೆದ ಸ್ಥಳದಲ್ಲಿ ಟಾರ್ ರಸ್ತೆಯ ಮೇಲೆ ಬಿದ್ದಿದ್ದ ರಕ್ತದ ಕಲೆಗಳನ್ನು ಕೆರೆದು ಒಂದು ಖಾಕಿ ಬಣ್ಣದ ಕವರಿನಲ್ಲಿ ಹಾಕಿ ಸಂಗ್ರಹಿಸಿದ್ದೇನೆ. ಅದರ ಮೇಲೆ ನನ್ನ ಮತ್ತು ಪಂಚರ ಸಹಿಗಳಿರುವ ಚೀಟಿಯನ್ನು ಅಂಟಿಸಿ ಅಮಾನತು ಪಡಿಸಿಕೊಂಡಿದ್ದೇನೆ. ಸದರಿ ಟಾರ್ ರಸ್ತೆಯ ಮೇಲೆ ಸಂಗ್ರಹಿಸಿದ ರಕ್ತದ ಕಲೆಗಳಿರುವ ಟಾರ್ ರಸ್ತೆಯ ಪುಡಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ.

6. ನಂತರ ಸ್ಥಳದಲ್ಲಿದ್ದ ಫ್ರಾಸಾ.1 ರವರು ಅವರ ಮನೆಯ ಮುಂದಿನ ಶೆಡ್ ನಲ್ಲಿ ಇದ್ದ ಒಂದು ರಕ್ತದ ಕಲೆಯಿದ್ದ ಒಂದು ಗುದ್ದಲಿಯನ್ನು ತೋರಿಸಿ ಅದನ್ನು ಆರೋಪಿ ತನ್ನ ಗಂಡನ ಮೇಲೆ ಮರಣಾಂತಿಕ ಹಲ್ಲೆ ಮಾಡಲು ಬಳಸಿ ಅಲ್ಲಿ ಬಿಸಾಡಿ ಹೋಗಿದ್ದಾಗಿ ತಿಳಿಸಿದ ಮೇರೆಗೆ ನಾನು ಸದರಿ ಗುದ್ದಲಿಯನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ಪರಿಶೀಲಿಸಲಾಗಿ ಅದು

ಮರದ ಹಿಡಿಯಿರುವ ಗುದ್ದಲಿಯಾಗಿದ್ದು, ಅದರ ಬಾಯಿಯ ಹತ್ತಿರ ರಕ್ತದ ಕಲೆ ಇರುವುದು ಕಂಡುಬಂತು. ಅದನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದು ಬಿಳಿಯ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಬಾಯಿಯನ್ನು ದಾರದಿಂದ ಕಟ್ಟಿ ಅರಗು ಮಾಡಿ R ಎಂಬ ಅಕ್ಷರದಿಂದ ಸೀಲ್ ಮಾಡಿ ಅಮಾನತುಪಡಿಸಿಕೊಂಡು ಅದರ ಮೇಲೆ ನನ್ನ ಮತ್ತು ಪಂಚರ ಸಹಿಗಳಿರುವ ಚೀಟಿಯನ್ನು ಅಂಟಿಸಿದೆನು. ಸಾಕ್ಷಿಯು ಸದರಿ ಗುದ್ದಲಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿರುತ್ತದೆ. ಮು.ಮಾ.1 ಮತ್ತು 2 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.1(ಸಿ) ಮತ್ತು ಮು.ಮಾ.2(ಸಿ) ಎಂದು ಗುರುತಿಸಲಾಯಿತು.

7. ನಂತರ ಠಾಣೆಗೆ ಹಿಂದಿರುಗಿ ಮೇಲೆ ಹೇಳಿದ ಪಂಚನಾಮೆಯ ಕಾಲಕ್ಕೆ ಅಮಾನತು ಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ: 40/2023 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಾಲುಪಟ್ಟಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮಾಲುಪಟ್ಟಿಯನ್ನು ನಿಪಿ.45 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.45(ಎ) ಎಂದು ಗುರುತಿಸಲಾಯಿತು.

8. ನಂತರ ಅದೇ ದಿನ ನಾನು ಮಂಗಳೂರಿನ ವೆನಲಾಕ್ ಆಸ್ಪತ್ರೆಗೆ ಭೇಟಿ ನೀಡಿ ಪ್ರಾಸಾ.3, ಚಾಸಾ.3 ಮತ್ತು ಚಾಸಾ.4 ರವರಿಗೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ ಬರಮಾಡಿಕೊಂಡೆನು. ಸದರಿ ನೋಟೀಸನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.18 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.18(ಬಿ) ಎಂದು ಗುರುತಿಸಲಾಯಿತು. ನಂತರ ಪಂಚರ ಸಮಕ್ಷಮ ಸದರಿ ಆಸ್ಪತ್ರೆಯ ಶವಗಾರದಲ್ಲಿ ಮಧ್ಯಾಹ್ನ 1.30 ರಿಂದ 3.30 ಗಂಟೆಯವರೆಗೆ ರವಿರವರ ಶವ ತನಿಖೆಯನ್ನು ನಡೆಸಿ ಆ ಬಗ್ಗೆ ಶವ ಪಂಚನಾಮೆಯನ್ನು ಜರುಗಿಸಿದೆನು. ಸದರಿ ಶವ ಪಂಚನಾಮೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಶವ ಪಂಚನಾಮೆಯನ್ನು ಈಗಾಗಲೇ ನಿಪಿ.19 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.19(ಬಿ) ಎಂದು ಗುರುತಿಸಲಾಯಿತು.

9. ಸದರಿ ಶವ ಪಂಚನಾಮೆಯ ಕಾಲಕ್ಕೆ ಪ್ರಾಸಾ.9 ರವರು ನನ್ನ ಸೂಚನೆಯ ಮೇರೆಗೆ ಫೋಟೋಗಳನ್ನು ತೆಗೆದಿರುತ್ತಾರೆ. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.9 ರಿಂದ ಪಿ.17 ಎಂದು ಗುರುತಿಸಲಾಗಿರುತ್ತದೆ. ಸದರಿ ಪಂಚನಾಮೆಯ ಕಾಲಕ್ಕೆ ಮೃತನ ಮೈಮೇಲೆ ಕಂಡುಬಂದ ಗಾಯಗಳ ವಿವರಗಳನ್ನು ಮತ್ತು ಅವರ ಮೈಮೇಲೆ ಇದ್ದ ಬಟ್ಟೆಗಳ ವಿವರಗಳನ್ನು ಶವ ಪಂಚನಾಮೆಯಲ್ಲಿ ನಮೂದು ಮಾಡಿದ್ದೇನೆ.

10. ಸದರಿ ಪಂಚನಾಮೆಯ ಕಾಲಕ್ಕೆ ಮೃತರ ಮಕ್ಕಳಾದ ಪ್ರಾಸಾ.2 ಮತ್ತು ಚಾಸಾ.6 ಮತ್ತು ಇತರೆ ಸಾಕ್ಷಿದಾರರಾದ ಪ್ರಾಸಾ.4 ರವರ ಹೇಳಿಕೆಗಳನ್ನು ಪಡೆದುಕೊಂಡೆನು. ನಂತರ ಮೃತನ ಮರಣೋತ್ತರ ಪರೀಕ್ಷೆಗಾಗಿ ಶವವನ್ನು ಸದರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಬಿಟ್ಟುಕೊಟ್ಟು ಆ ಬಗ್ಗೆ ಅವರಿಗೆ ಮನವಿ ಸಲ್ಲಿಸಿದೆನು. ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ಪ್ರಾಸಾ.1 ರವರಿಗೆ ಸಿಬ್ಬಂದಿ ನೀಡಿ ಹಿಂಬರಹವನ್ನು ಪಡೆದುಕೊಂಡಿರುತ್ತಾರೆ.

11. ದಿಃ 15-03-2023 ರಂದು ಚಾಸಾ.9 ರವರ ಹೇಳಿಕೆಯನ್ನು ಪಡೆದೆನು. ದಿಃ 18-03-2023 ರಂದು ಎನ್.ಆರ್.ಪುರ ಜೆ.ಎಂ.ಎಫ್.ಸಿ ನ್ಯಾಯಾಧೀಶರಿಗೆ ಮನವಿಯನ್ನು ಸಲ್ಲಿಸಿ ಪ್ರಾಸಾ.1 ರವರ ಹೇಳಿಕೆಯನ್ನು ಸಿ.ಆರ್.ಪಿ.ಸಿ ಕಲಂ 164 ರಡಿಯಲ್ಲಿ ದಾಖಲಿಸಿ ಕೊಡುವಂತೆ ಕೋರಿದೆನು. ಸದರಿ ಮನವಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಮನವಿಯನ್ನು ನಿಪಿ.46 ಎಂದು, ಸಾಕ್ಷಿಯ ಸಹಿಯನ್ನು ನಿಪಿ.46(ಎ) ಎಂದು ಗುರುತಿಸಲಾಯಿತು. ಅದೇ ದಿನ ಪ್ರಾಸಾ.1 ರವರನ್ನು ಚಾಸಾ.19 ರವರು ಸದರಿ ನ್ಯಾಯಾಧೀಶರ ಬಳಿ ಹಾಜರುಡಿಸಿದ್ದು ಸದರಿ ನ್ಯಾಯಾಧೀಶರು ಅವರ ಹೇಳಿಕೆಯನ್ನು ಸಿ.ಆರ್.ಪಿ.ಸಿ ಕಲಂ 164 ರಡಿಯಲ್ಲಿ ದಾಖಲಿಸಿದ್ದು ಅದನ್ನು ನಾನು ಅದೇ ದಿನ ಸದರಿ ನ್ಯಾಯಾಧೀಶರಿಂದ ಪಡೆದುಕೊಂಡೆನು. ಸಾಕ್ಷಿಯು ಸದರಿ ಹೇಳಿಕೆಯನ್ನು ಮತ್ತು ಅದರಲ್ಲಿರುವ ತನ್ನ ಸ್ವೀಕೃತಿ ಸಹಿಯನ್ನು

ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯನ್ನು ನಿಪಿ.47 ಎಂದು, ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.47(ಎ) ಎಂದು ಗುರುತಿಸಲಾಯಿತು.

12. ದಿಃ 19-03-2023 ರಂದು ಪ್ರಾಸಾ.1 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡೆನು. ಮಂಗಳೂರಿನ ವೆನಲಾಕ್ ಆಸ್ಪತ್ರೆಯಿಂದ ಮೃತ ರವಿರವರ ಮರಣೋತ್ತರ ಪರೀಕ್ಷಾ ವರದಿಯನ್ನು ಮತ್ತು ಮರಣೋತ್ತರ ಪರೀಕ್ಷೆಯನ್ನು ನಡೆಸಿದ ವೈದ್ಯರಾದ ಪ್ರಾಸಾ.5 ರವರು ಸಂಗ್ರಹಿಸಿದ್ದ ವಿಸ್ರಾವನ್ನು ಚಾಸಾ.17 ರವರು ಪಡೆದುಕೊಂಡು ದಿಃ 20-03-2023 ರಂದು ನನ್ನ ಮುಂದೆ ಹಾಜರುಪಡಿಸಿದರು. ಸಾಕ್ಷಿಯು ಸದರಿ ಮರಣೋತ್ತರ ಪರೀಕ್ಷಾ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸ್ವೀಕೃತಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಮರಣೋತ್ತರ ಪರೀಕ್ಷಾ ವರದಿಯನ್ನು ಈಗಾಗಲೇ ನಿಪಿ.31 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.31(ಎಫ್) ಎಂದು ಗುರುತಿಸಲಾಯಿತು.

13. ಸದರಿ ವಿಸ್ರಾ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆಃ 46/2023 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಾಲುಪಟ್ಟಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮಾಲುಪಟ್ಟಿಯನ್ನು ನಿಪಿ.48 ಎಂದು ಅದರಲ್ಲಿರುವ

ಸಾಕ್ಷಿಯ ಸಹಿಯನ್ನು ನಿಪಿ.48(ಎ) ಎಂದು ಗುರುತಿಸಲಾಯಿತು.

14. ದಿಃ 20-03-2023 ರಂದು ಕೃತ್ಯ ನಡೆದ ಸ್ಥಳದ ಬಗ್ಗೆ ದಾಖಲೆಯನ್ನು ನೀಡುವಂತೆ ಬಿ.ಕಣಬೂರು ಗ್ರಾಮ ಪಂಚಾಯ್ತಿಯ ಪಿ.ಡಿ.ಒ. ರವರಿಗೆ ಮತ್ತು ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಡುವಂತೆ ಕೊಪ್ಪ ಲೋಕೋಪಯೋಗಿ ಇಲಾಖೆಗೆ ಮನವಿಗಳನ್ನು ಸಲ್ಲಿಸಿದೆನು. ಸಾಕ್ಷಿಯು ಸದರಿ ಮನವಿಗಳನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮನವಿಗಳನ್ನು ಈಗಾಗಲೇ ಕ್ರಮವಾಗಿ ನಿಪಿ.32 ಮತ್ತು ಪಿ.35 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.32(ಎ) ಮತ್ತು ಪಿ.35(ಎ) ಎಂದು ಗುರುತಿಸಲಾಯಿತು.

15. ದಿಃ 21-03-2023 ರಂದು ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿ ಆರೋಪಿಯನ್ನು ಎರಡು ದಿನಗಳ ಕಾಲ ನನ್ನ ವಶಕ್ಕೆ ಪಡೆದುಕೊಂಡು ಆತನನ್ನು ವಿಚಾರಿಸಿ ಆತನ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡೆನು. ಆರೋಪಿ ತನ್ನ ಸ್ವಚ್ಛಾ ಹೇಳಿಕೆಯಲ್ಲಿ "ಈಗ ನೀವು ಬಂದರೆ ನಾನು ಬಂದು ವಾಸವಿದ್ದ ನನ್ನ ತಂಗಿಯ ಮನೆ, ರವಿರವರನ್ನು ಕೊಲೆ ಮಾಡಲು ಗುದ್ದಲಿ ಎತ್ತಿಕೊಂಡ ಸ್ಥಳ, ನಾನು ರವಿರವರನ್ನು ಗುದ್ದಲಿಯಿಂದ ಕಡಿದು ಕೊಲೆ ಮಾಡಿದ ಸ್ಥಳ ನಂತರ ಗುದ್ದಲಿಯನ್ನು ಬಿಸಾಡಿದ್ದ ಸ್ಥಳವನ್ನು ತೋರಿಸುತ್ತೇನೆ" ಎಂದು ನುಡಿದಿರುತ್ತಾನೆ. ಆರೋಪಿಯ ಸ್ವಚ್ಛಾ ಹೇಳಿಕೆಯ ಸದರಿ ಭಾಗವನ್ನು ನಿಪಿ.49

ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.49(ಎ) ಎಂದು ಗುರುತಿಸಲಾಯಿತು. ಆರೋಪಿ ತನ್ನ ಸ್ವಚ್ಛಾ ಹೇಳಿಕೆಯಲ್ಲಿ ಆ ದಿನ ತಾನು ಧರಿಸಿದ್ದ ಬಟ್ಟೆಗಳನ್ನೇ ಕೃತ್ಯವೆಸಗಿದ ಸಮಯದಲ್ಲಿ ಧರಿಸಿದ್ದಾಗಿ ಮತ್ತು ಅವುಗಳನ್ನು ತಾನು ಜೈಲಿನಲ್ಲಿರುವಾಗ ತೊಳೆದು ಹಾಕಿಕೊಂಡಿದ್ದಾಗಿ ತಿಳಿಸಿರುತ್ತಾನೆ.

16. ನಂತರ ನಾನು ಪ್ರಾಸಾ.3 ಮತ್ತು 4 ರವರಿಗೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ ಬಾಳೆಹೊನ್ನೂರು ಪೊಲೀಸ್ ಠಾಣೆಗೆ ಬರಮಾಡಿಕೊಂಡೆನು. ಸದರಿ ನೋಟೀಸನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.20 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.20(ಸಿ) ಎಂದು ಗುರುತಿಸಲಾಯಿತು. ಆರೋಪಿ ಪ್ರಾಸಾ.1 ರವರ ಮನೆಯಲ್ಲಿ ಉಳಿದುಕೊಂಡಿದ್ದರಿಂದ ಅವರ ಮನೆಯಿಂದ ಆರೋಪಿಯ ಬಟ್ಟೆಗಳನ್ನು ತರಿಸಿಕೊಂಡು ಅವುಗಳನ್ನು ಆರೋಪಿತನಿಗೆ ನೀಡಿದ ಮೇರೆಗೆ ಆತ ಅವುಗಳನ್ನು ಹಾಕಿಕೊಂಡು ಆ ಸಮಯದಲ್ಲಿ ಆತ ಧರಿಸಿದ್ದ ಒಂದು ಬಿಳಿ, ನೀಲಿ, ಹಸಿರು ಬಣ್ಣ ಮಿಶ್ರಿತ ಚೌಕಳಿ ಇರುವ ತುಂಬು ತೋಳಿನ ಶರ್ಟು ಮತ್ತು ಒಂದು ನೀಲಿ ಬಣ್ಣದ ಜೀನ್ಸ್ ಪ್ಯಾಂಟನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ಹಾಜರುಪಡಿಸಿದ ಮೇರೆಗೆ ಅವುಗಳನ್ನು ಪ್ರತ್ಯೇಕವಾಗಿ ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಬಾಯಿಯನ್ನು ದಾರದಿಂದ ಕಟ್ಟಿ R ಎಂಬ ಅಕ್ಷರದಿಂದ ಸೀಲ್ ಮಾಡಿ ಅಮಾನತು ಪಡಿಸಿಕೊಂಡೆನು.

17. ಆ ಬಗ್ಗೆ ಸಂಜೆ 5.15 ರಿಂದ 5.45 ಗಂಟೆಯವರೆಗೆ ಮೇಲೆ ಹೇಳಿದ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.21 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.21(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಮೇಲೆ ಹೇಳಿದ ಪಂಚರ ಮತ್ತು ಆರೋಪಿಯ ಸಹಿಯನ್ನು ಪಡೆದುಕೊಂಡೆನು. ಸಾಕ್ಷಿಯು ಗುರುತಿಸಿದ ಮೇರೆಗೆ ನಿಪಿ.21 ರಲ್ಲಿರುವ ಆರೋಪಿಯ ಸಹಿಯನ್ನು ನಿಪಿ.21(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಬಟ್ಟೆಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.3 ಮತ್ತು 4 ಎಂದು ಗುರುತಿಸಲಾಗಿರುತ್ತದೆ. ಮು.ಮಾ.3 ಮತ್ತು 4 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.3(ಡಿ) ಮತ್ತು ಮು.ಮಾ.4(ಡಿ) ಎಂದು ಗುರುತಿಸಲಾಯಿತು.

18. ಸದರಿ ಶವ ಪಂಚನಾಮೆಯ ಕಾಲಕ್ಕೆ ಫ್ರಾಸಾ.9 ರವರು ನನ್ನ ಸೂಚನೆಯ ಮೇರೆಗೆ ಫೋಟೋಗಳನ್ನು ತೆಗೆದಿರುತ್ತಾರೆ. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.22 ಮತ್ತು ಪಿ.23 ಎಂದು ಗುರುತಿಸಲಾಗಿರುತ್ತದೆ. ಆರೋಪಿಯಿಂದ ಅಮಾನತುಪಡಿಸಿಕೊಂಡ ಬಟ್ಟೆಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ: 47/2023 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ

ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಾಲುಪಟ್ಟಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮಾಲುಪಟ್ಟಿಯನ್ನು ನಿಪಿ.50 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.50(ಎ) ಎಂದು ಗುರುತಿಸಲಾಯಿತು.

19. ನಂತರ ಆರೋಪಿಯ ಸ್ವಇಚ್ಛಾ ಹೇಳಿಕೆಯ ಮೇರೆಗೆ ಮಹಜರ್ ಕ್ರಮ ಜರುಗಿಸಲು ಮೇಲೆ ಹೇಳಿದ ಪಂಚರನ್ನು ಮತ್ತು ಆರೋಪಿಯನ್ನು ಕರೆದುಕೊಂಡು ಸಂಜೆ 5.45 ಗಂಟೆಗೆ ಠಾಣೆಯಿಂದ ಹೊರಟೆನು. ನಂತರ ಆರೋಪಿ ತೋರಿಸಿದ ಮಾರ್ಗವಾಗಿ ಎನ್.ಆರ್.ಪುರ ರಸ್ತೆಯ ಮುಖಾಂತರ ಸಂಜೆ 5.55 ಗಂಟೆಗೆ ಸೀಕೆ ಗ್ರಾಮಕ್ಕೆ ತಲುಪಿದೆವು.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರ ಕೋರಿಕೆಯ ಮೇರೆಗೆ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ